ಮರಳುವವರಾಗಿದ್ದರು. ಕೆಲಸ ಸಿಗದ ದಿನ ಒಂದು ಬನ್ನು ತಿಂದು ಟೀ ಕುಡದು ಹ್ಯಾಪುಮೋರೆ ಹಾಕಿಕ್ಕಂಡು ಹಳ್ಳಿಗೆ ವಾಪಸಾಗುತ್ತಿದ್ದರು. ಇಂಥ ಸೀನಣ್ಣನವರು ದಿನವೂ ಮೈಸೂರು ನಗರವ ದರ್ಶನ ಮಾಡಿಕೊಂಡು ಬರುತ್ತಾರೆ. ವಂದಷ್ಟು ಹಸಿಬಿಸಿ ಸುದ್ದಿಗಳನ್ನು ತರುತ್ತಾರೆ. ಅವರ ಕೈನಾಗೆ ಅಂಗೈ ಅಗಲದ್ದೊಂದು ಮೊಬೈಲು ರಾರಾಜಿಸುತ್ತಿರುತ್ತದೆ. ಈ ಇಂಥ ಕೆಲವು ಕಾರಣಗಳಿಗಾಗಿ ಸೀನಣ್ಣನೋರು ಹಳ್ಳಿಯಲ್ಲಿ ಬಹಳ ಗ್ರಾಸ್ತರೇ ಹೌದು.

ಮೊದಲೇ ಬರ ಬೇಸಿಗೆಯ ಕಾಲ. ಭೂತಾಯಿ ಉರಿದು ಉರಿದು ಕೆಂಡವಾಗಿದ್ದಳು. ಕೆಂಡದಂಥ ನೆಲದ ಮೇಲೆ ಮಲಗಿ ಹೊದಿಕೆ ಹೊದ್ದುಕೊಳ್ಳಲಾಗದೆ ಸೊಳ್ಳೆಗಳ ಕಾಟಕ್ಕೆ ಅವುಗಳ ತೆಗೆದೆಸೆಯಲೂ ಆಗದೆ ಇಡೀ ರಾತ್ರಿ ಹೊರಳಾಡಿ ಹೊರಳಾಡಿ ಬೆಳಗಿನ ಜಾವದಾಗೆ ವಂದಷ್ಟು ಕಣ್ಣು ಕೂಡಿದಂತಾಗಿದ್ದ ಜನ ಸಾವಿನ ಸುದ್ದಿ ಕಿವಿಗೆ ಬೀಳುತ್ತಿದ್ದಂತೆಯೇ ಜೀವ ಬಂದಂತವರಾಗಿ ಪಟಕ್ಕನೆ ಕಣ್ಣು ತೆರಕೊಂಡವರಾಗಿದ್ದರು. ಜಿಬರೆಗಣ್ಣು, ಜೊಲ್ಲಿನ ಗೆರೆಗಳ ಕಟವಾಯಿ, ಬೆವೆತು ಎಣ್ಣೆ ಕುಂತ ಮುಖಗಳನ್ನು ಹೊತ್ತುಕೊಂಡು ತಮ್ಮ ತಮ್ಮ ಹಟ್ಟಿಗಳಿಂದ ಹೊರಬರತೊಡಗಿದ್ದರು.

"ಚೆಂದಗಂದಾನಾಗೆ ಇದ್ದನಲ್ಲ, ವಾದಸಲ ಬಂದಾಗ. ಇದ್ದಕ್ಕಿದ್ದಂಗೇ ಏನಾಗೋಯ್ತು ಅವ್ನಗೆ" ಏಳಲಾಗದೆ ಜಗುಲಿಗಂಟಿಕೊಂಡೇ ಮನಗಿದ್ದ ರುದ್ರಜ್ಜ ಹಂಗಂಗೇ ಜರುಗಿ, ಮಗ್ಗುಲಾಗಲೆತ್ನಿಸುತ್ತಾ ವತ್ತರಿಸಿ ಬರುತ್ತಿದ್ದ ಗೂರಲು ಕೆಮ್ಮಿನೊಡನೆಯೇ ಕೇಳಿತ್ತು. ರುದ್ರಜ್ಜ ಹೇಳಿದ 'ವಾದಸಲ' ಎಂಬೊಂದು ಪದಕ್ಕೆ ಹೆಚ್ಚು ಕಡಿಮೆ ಅವನು ಹೋದಂದಿನಿಂದ ಇವತ್ತಿನವರೆಗೆ ಎಂದೇ ಅರ್ಥವಿರುವುದು. ಕುಂತಲ್ಲೇ ಕುಂತು ಬಿಟ್ಟು ಶಿವನ ಕರೆಗಾಗಿ ಕಾಯುತ್ತಿದ್ದ ರುದ್ರಜ್ಜನಿಗೆ ಅದು ನೆನ್ನೆಮೊನ್ನಿನ ವಿಷಯದಂತೆಯೇ ಇತ್ತು. ಆ ದಿನದ ನೆನಪು ರುದ್ರಜ್ಜನಲ್ಲಿ ಹಸಿರಾಗಿಯೇ ಕುಂತದೆ. ಹೆಗಲಿಗೊಂದೆ ಬ್ಯಾಗ್ ಏರಿಕೊಂಡು ಹಾದಿಗುಂಟ ಹೋಗುತ್ತಿದ್ದ ಮೃತ್ಯೂನನ್ನು ಅಜ್ಜ ಬಲವಂತವಾಗಿಯೇ ಮಾತಿಗೆ ನಿಲ್ಲಿಸಿಕೊಂಡಿತ್ತು. "ಮೃತ್ಯೂ ಅಲ್ಲವೇನ್ಲಾ ಮಗಾ? ಚೆನ್ನಾಗಿದ್ದೀಯಾ? ಚೆನ್ನಾಗೇ ಇದ್ದಯಿ, ಬುಡು. ಇರ್ದೆ ಏನಂತೆ. ಲಗ್ಣ ಆಯ್ತುಲ್ಲವಾ? ಹೆಂಗೋಳೆ ನಿನ್ನ ಹೆಂಡ್ರು? ನಿನ್ ಹೆಡ್ತಿಯಾ ಚೆನ್ನಾಗಿ ಬಾಳಿಸ್ತಾ ಇದ್ದಯಾ ಹೆಂಗೆ?' ಕಣ್ಣು ಮಿಟುಗಿಸುತ್ತಾ ಕೇಳಿತ್ತು. ಹಿರಿತಲೆಯೆಂದು ಕೈ ಹಿಡಿಸಿಕೊಂಡು ನಿಂತಿದ್ದ ಅವನು ಕೈಕಿತ್ತುಕೊಂಡು ಭರಭರ ಹೊಂಟು ಬಿಟ್ಟಿದ್ದ. ಅದೆಲ್ಲವಾ ಸೆನ್ಸಾರ್ ಮಾಡಿಕೊಂಡಿದ್ದ ಅಜ್ಜ, "ಇಕಾ ತಗಾ ಅಜ್ಜ ತಿನ್ನೂಂತ ಕೈ ತುಂಬಾ ಹಣ್ಣುಗೋಳಾ ಪೊಟ್ಟಣ ಕೊಟ್ಟಿದ್ದ. ನಾಕು ತುಂಡು ಬೆಡ್ನೂ ಕೊಟ್ಟಿದ್ದ ಅಂತೀನಿ" ಸುಖಾಸುಮ್ಮನೆ ಮೃತ್ಯೂನನ್ನು ಮೇಲಕ್ಕೇರಿಸಲು ಕಥೆ ಕಟ್ಟಲು ತೊಡಗಿತ್ತು. "ತ್ಚು ತ್ಚು ತ್ಚೂ ದೇವ್ರಂಥ ಮನ್ಸಾ, ದೇವ್ರಂಥ ಮನ್‌ಸಾ" ಯಾರು ಕೇಳಲಿ ಬಿಡಲಿ ತನ್ನ ಶ್ರದ್ಧಾಂಜಲಿಯ ದಿವೀನಾಗಿ ಅರ್ಪಿಸಿಯೇ ಬುಟ್ಟು ತನ್ನ ಕೆಲಸ ಮುಗಿತೆಂಬಂತೆ ಗೋಡೆಗಾತು ಕುಂತುಬಿಟ್ಟಿತ್ತು.

'ದಿಟವೇನ್ಲಾ ಸೀನಣ್ಣ' ಶಿವಯ್ಯ ವಿಚಾರಣೆ ಆರಂಭಿಸಿದ್ದ. 'ದೇವ್ರಾಣೇಗೂ ನಿಜ ಕಣಪ್ಪಾ. ಮೃತ್ಯೂ ಸಾಯ್ತನೆ ಅಂದರೆ ನನ್ಗೆ ಬರಾ ಐಬೋಗವೇನು? ಇಕಾ ನೋಡಿಲ್ಲಿ" ಹೆಚ್ಚು ಮಾತು ಬಳಸದೆ ತನ್ನ ಸುದ್ದಿಯ ಪ್ರಾಮಾಣ್ಯ ತನ್ನ ಮೊಬೈಲೇ ಎಂಬಂತೆ ಮೊಬೈಲ ಮುಂದೆ ಒಡ್ಡಿದ್ದ ಸೀನಣ್ಣ. ಜನವೀಗ ಮಾಯಾಪೆಟ್ಟಿಗೆ ನೋಡಲು ಮುಗಿಬೀಳುವಂತೆ ಅವನ ಮೇಲೆ ಬಿದ್ದಿದ್ದರು. ಯಾವ ಆಸ್ಪತ್ರೆಯೋ ಏನೋ?! ಆರಡಿ ಉದ್ದದ ಮೃತ್ಯೂನಾ ದೊಡ್ಡ ದೇಹ ಬಿಳಿಯ ಬಟ್ಟೆಯನ್ನು ಸುತ್ತಿಕೊಂಡು ಬಿದ್ದುಕೊಂಡಿತ್ತು. ಬಿಳಿಯ ಬಟ್ಟೆಯಲ್ಲಿ ಕಾಣುತ್ತಿದ್ದದ್ದು ಕಪ್ಪುಮೋರೆಯೊಂದೇ?! ಅದು ಅವನ ಸಾವನ್ನು ನೆರೆದವರೆದುರು ಅಧಿಕೃತಗೊಳಿಸುವಂತೆ ರಾರಾಜಿಸುತ್ತಿತ್ತು. ಥತ್ಥೇರಿ. ಹೆಣದ ಮೊಖಾ ಎಲ್ಲಾದರೂ ರಾರಾಜಿಸೀತಾ?! ತಲೆಕೊಡವಿಕೊಂಡ ಗುಂಪು ಸಾವಿನ ಸುದ್ದಿ ಬರೀ ಪ್ರಾಮಾಣ್ಯದ ಮಟ್ಟದಲ್ಲೇ ನಿಂತುಬಿಟ್ಟ ಕಾರಣವಾಗಿ ಅವನ ಸಾವಿಗೆ ರುದ್ರಜ್ಜನಂತಷ್ಟಾದರೂ ಸುಳ್ಳಿನ ಶ್ರದ್ಧಾಂಜಲಿ ಸಲ್ಲಿಸಲೂ ಸಾಧ್ಯವಿಲ್ಲದವರಾಗಿ 'ತ್ಚು ತ್ಚು ಪಾಪಾ'ಗಳ ಉದ್ಗಾರಗಳ ಹೊರಡಿಸುತ್ತಾ ಮೃತ್ಯುವಿಗೆ